ಹಾಕಿಕೊಂಡಿದ್ದರು. ಕಟೀಲಿನಿಂದ ಹಿಂದಿರುಗಿದ ಮಾರಪ್ಪ ಆಳ್ವರನ್ನು, ಶೆಟ್ಟರು ತನ್ನ ಹೆಂಡತಿ ಚೆಂದಕ್ಕೆಯವರ ಮೂಲಕ ಒತ್ತಾಯ ಮಾಡಿಸಿ ರಾತ್ರಿ ಕೆರೆಕೋಡಿಯಲ್ಲೇ ಉಳಿಸಿಕೊಂಡಿದ್ದರು. ತಂಗಿ ಮಾತನ್ನು ಮೀರುವ ಅಣ್ಣನೇನು ಮಾರಪ್ಪ ಆಳ್ವರು?! ಅಂದು ರಾತ್ರಿ ಗೇರುಹಣ್ಣಿನ ಗಂಗಸರದ ಜತೆ ಕೋಳಿಪುಂಡಿಯ ಗಮ್ಮತ್ತೂ ನಡೆಯಿತು.

ಮರುದಿನ ಬೆಳಿಗ್ಗೆ ಎದ್ದ ಇಬ್ಬರೂ ತಮ್ಮ ಪ್ರಾತಃಕಾಲದ ಕೆಲಸವನ್ನೆಲ್ಲ ಮುಗಿಸಿ, ನೀರುದೋಸೆ ಕೋಳಿಗಸಿಯ 'ಸಮಾರಾಧನೆ' ಮುಗಿಸಿಕೊಂಡು ನೇರ ಇಳಿದದ್ದು ಬೈಲಿಗೆ. ಬೈಲುಗಳನ್ನು ದಾಟಿಕೊಂಡು ಮಿತ್ತಬೈಲಿಗೆ ಬರುವಾಗ ಅಳಿಯ ಸಾಧು ಶೆಟ್ಟಿ, ಮನೆ ಎದುರಿನ ಗದ್ದೆಯಲ್ಲಿದ್ದ ಉದ್ದು, ಹೆಸರು, ಹುರುಳಿ ಗಿಡಗಳನ್ನು ಹರಿಯುವ ಕೆಲಸ ಮುಗ್ಸಿ ಸೌತೆಗಳನ್ನು ಕೊಯ್ಯುವ ಕಾಲವದು. ಒಂದಷ್ಟು ದೂರದಲ್ಲಿ ತನ್ನ ಮಾವಂದಿರಿಬ್ಬರೂ ಗದ್ದೆಹುಣಿಯಾಗಿ ಬರುವುದನ್ನು ಕಂಡವನೇ ಸಾಧುಶೆಟ್ಟಿಯು, ತಾನೇ ಮುಂದುವರಿದು ಅವರತ್ತ ಹೋಗಬೇಕೆನ್ನುವಷ್ಟರಲ್ಲಿ ಅವರು ಕಟ್ಟಹುಣಿ ದಾಟಿ ಬಂದಾಗಿತ್ತು. ಆತನಿದ್ದ ಗದ್ದೆಯತ್ತ... ಅವರಿಬ್ಬರೂ, ಬಂದೂ ಬಂದ ಕಾರಣ ಹೇಳುವಷ್ಟರಲ್ಲಿ ಅವರಿಗೆ ಬಾಯಾರಿಕೆ ಆರಲು ಉಪ್ಪು, ಹಸಿಮೆಣ್ಸು ನುರಿದ ಮಜ್ಜಿಗೆನೀರು ಸರಬರಾಜಾಗಿತ್ತು. ಮಜ್ಜಿಗೆನೀರು ಕುಡಿದು ಬಾಯಾರಿಕೆ ಮುಗಿಸಿದೊಡನೆ ದೇವಪ್ಪ ಶೆಟ್ಟರು 'ಬಾ ಮಾರಾಯ... ಒಮ್ಮೆ ನಿನ್ನ ತೇಗದ ಮರ ತೋರ್ಸು; ಭಾವನೂ ಒಮ್ಮೆ ನೋಡ್ಲಿ' ಎಂದು ಸಾಧುಶೆಟ್ಟಿಯನ್ನು ಅವಸರಿಸಿದ್ದರು.

ಸರಿ, ಎಲ್ಲರೂ ಗದ್ದೆಹುಣಿಯಾಗಿಯೇ ಮರಗಳಿದ್ದ ಕಟ್ಟಹುಣಿಯತ್ತ ಹೆಜ್ಜೆ ಹಾಕಿದ್ದರು. ಹಾಗೆ ನಡೆಯುತ್ತಿದ್ದಂತೆ... ಸಾಧುಶೆಟ್ಟಿ ಒಂದು ಗಳಿಗೆ ನಿಂತವನೆ ಮೂಡಣಕ್ಕೆ ಕೈ ತೋರಿಸಿ, ನೋಡಿ, ನೋಡಿ... ಓ ಅಲ್ಲಿ... ಕೋಟಿ ಚೆನ್ನಯರಂತೆ. ಎರಡು ತೆಕ್ಕಿದ ಮರಗಳು ನಿಂತಿದೆಯಲ್ವಾ... ಅಂವೆ' ಎಂದು ಹೇಳುತ್ತಾ ಮತ್ತೆ ಮುಂದುವರಿದಿದ್ದ. ಇನ್ನು ಆ ಎರಡು ದೊಡ್ಡ ದೊಡ್ಡ ಗದ್ದೆಗಳನ್ನು ದಾಟಿದರೆ ಮುಗಿಯಿತು ಮತ್ತೆ ಸಿಗುವುದೇ ಆ ಮರಗಳಿರುವ ಕಟ್ಟಹುಣಿ. ಆ ಕಟ್ಟಹುಣಿಯ ಕೆಳಗಿರುವ ಎರಡು ಮುಡಿ ವಿಸ್ತಾರದ ಎರಡು

